CC No. 1351/2024
PW- 1

**ದಿನಾಂಕ: 16-.10.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ವಿಚಾರಣೆ: ಆರೋಪಿ ಪರ ಶ್ರೀ. ಆರ್ ವಿ ಡಬ್ಲ್ಯೂ ವಕೀಲರಿಂದ:**

ಯಾವ ವರ್ಷದಲ್ಲಿ ಆರೋಪಿ ಮತ್ತು ನಾನು ಕ್ಲೋಸ್ ಆಗಿದ್ದೆವು ಎಂಬುದು ಹೇಳಲು ಬರುವುದಿಲ್ಲ. ಆರೋಪಿಯಿಂದ ನನಗೆ ಹಣ ಮಾತ್ರ ಬರಬೇಕು. ಶಿಕ್ಷೆ ಮಾಡಿಸುವ ಉದ್ದೇಶ ನನಗೆ ಇಲ್ಲ. ನಾನು ಸಿವಿಲ್ ದಾವೆ ಮಾಡಿರುವುದಿಲ್ಲ. ಈ ಚೆಕ್ ಮೊತ್ತವನ್ನು ನೀಡುವಾಗ ಯಾವುದೇ ಆಧಾರ ಪಡೆದಿರುದಿಲ್ಲ. ಆ ಕಾಲಕ್ಕೆ ನಾವಿಬ್ಬರೆ ಮಾತ್ರ ಇದ್ದೆವು. ಅಕೌಂಟ್ ಕ್ಲೋಸ ಮತ್ತು ಟ್ರಾನ್ಸಫರ ಅಂತಾ ನಿಪಿ-2 ನ್ನು ಮಾತ್ರ ನೀಡಿರುತ್ತಾರೆ ಹಾಗೂ ಯಾವ ಆಧಾರದ ಮೇಲೆ ನಿಪಿ-2 ನೀಡಿರುತ್ತಾರೆ ಅಂತಾ ವಿಚಾರಿಸಿಲ್ಲ. ನಿಪಿ-2 ರಲ್ಲಿ ಟಿಕ್ ಮಾಡಿದ ಕಾಲಂ ನ ಹತ್ತಿರ ಸಹಿ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಕೆಳಗಡೆ ಸಹಿ ಮತ್ತು ಶೀಲು ಇದೆ ಎಂದು ನುಡಿಯತ್ತಾರೆ. ನಿಪಿ-2 ರ ಲ್ಲಿ ಅಕೌಂಟ್ ಕ್ಲೋಸ್ ಮತ್ತು ಅಕೌಂಟ ಟ್ರಾನ್ಸಫರ ಬಗ್ಗೆ ಕೇಳಿದಾಗ ಬ್ಯಾಂಕ್‌ನವರು ಅಕೌಂಟ್ ಕ್ಲೋಸ್ ಅಂತಾ ತಿಳಿಸಿರುತ್ತಾರೆ. ಆರೋಪಿ ನನ್ನ ಹತ್ತಿರ ಮೊದಲು 5 ಸಾವಿರ ದಿಂದ 10 ಸಾವಿರ ದವರೆಗೆ ಹಣವನ್ನು ಪಡೆದುಕೊಂಡು ವಾಪಸ್ಸು ಕೊಡುತ್ತಿದ್ದನು. ನಾನು ಆದಾಯ ತೆರಿಗೆ ಮತ್ತು ಜಿ ಎಸ್ ಟಿ ಮಾಡಿಸಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಾಖಲೆಗಳು ನನ್ನ ಬಳಿ ಇದೆ. ಆರೋಪಿಗೆ 5 ಲಕ್ಷ ಹಣ ನೀಡಿ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನನ್ನ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಹಾಗೂ ಆರೋಪಿ ನನಗೆ ಯಾವುದೇ ಚೆಕ್ ನ್ನು ನೀಡಿಲ್ಲ ಎಂದರೆ ಸರಿಯಲ್ಲ. 10-15 ವರ್ಷದ ಹಿಂದೆ ಆದ ವ್ಯವಹಾರಕ್ಕೆ ಬೇರೆಯವರಿಗೆ ನೀಡಿದ ಚೆಕ್ ನ್ನು ನಾನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

C/c ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಸಾಕ್ಷಿಧಾರರ
ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ./20**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆ:ಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ವಕೀಲರಿಂದಃ**

.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್